# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
# ಅಫಜಲಪೂರ

ಸಿಸಿ ನಂ.283/2016

ಚಾಸಾ-1 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ
ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕ: 18.12.2019

| | | |
|---|---|---|
| ಹೆಸರು | ಃ | ರೇವಣಸಿದ್ದಪ್ಪ ಅಖಂಡೆ |
| ತಂದೆ ಹೆಸರು | ಃ | ಕಲ್ಲಪ್ಪ |
| ವಯಸ್ಸು | ಃ | 61-ವರ್ಷ |
| ಉದ್ಯೋಗ | ಃ | ನಿವೃತ್ತ ಉಪ ನಿರ್ದೇಶಕರು |
| ವಾಸಸ್ಥಳ | ಃ | ಮಲ್ಲಾಬಾದ, ತಾ. ಅಫಜಲಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಅಗಷ್ಟ-2014 ರಿಂದ ಸೆಪ್ಟೆಂಬರ್-2014 ರವರೆಗೆ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಅಫಜಲಪೂರದಲ್ಲಿ ಕರ್ತವ್ಯ ನಿರ್ವಹಿಸಿರತ್ತೇನೆ. ಚಾಸಾ-4 ರವರು ಪ್ರಭಾರ ಸಹಾಯ ನಿರ್ದೇಶಕ ನರೇಗಾ ಯೋಜನೆ, ಚಾಸಾ-5 ವ್ಯವಸ್ಥಾಪಕರು ಜಿ.ಪಂ. ಕಲಬುರಗಿ ನರೇಗಾ ಯೋಜನೆ, ಚಾಸಾ-6 ರವರು ತಾ.ಪಂ. ಅಫಜಲಪೂರದಲ್ಲಿ ಕೇಸ ವರ್ಕರ್ ಎಂದು ಕೆಲಸ ಮಾಡಿರುತ್ತಾರೆ.

1 ನೇ ಆರೋಪಿತನು ಗೌರ ಬಿ. ದಲ್ಲಿ ಪಿಡಿಒ ಎಂದು ಕೆಲಸ ನಿರ್ವಹಿಸಿರುತ್ತಾರೆ. 2 ನೇ ಆರೋಪಿ ಪರಿಚಯವಿಲ್ಲ. 3 ನೇ ಆರೋಪಿ ಗೌರ

ಬಿ. ಪಂಚಾಯತಿಯಲ್ಲಿ ಕೆಲಸ ಮಾಡುತ್ತಿದ್ದ ಬೆಗ್ಗೆ ಗೊತ್ತು ಆದರೆ ಹುದ್ದೆ ಗೊತ್ತಿಲ್ಲ. 5 ರಿಂದ 12 ನೇ ಆರೋಪಿತರು ಗೊತ್ತಿಲ್ಲ.

ಸಿಇಒ ಜಿ.ಪಂ. ಕಲಬುರಗಿ ರವರಿಂದ ನರೇಗಾ ಯೋಜನೆಯಲ್ಲಿ ಅವ್ಯವಹಾರ ಹಾಗೂ ವಂಚನೆಯಾಗಿದೆ ಎಂದು ತಿಳಿಸಿ ಮೇರೆಗೆ ನಾನು ಅಫಜಲಪೂರ ಪೋಲಿಸ್ ಠಾಣೆಗೆ ಲಿಖಿತ ದೂರನ್ನು ನೀಡಿರುತ್ತೇನೆ. ಸಾಕ್ಷಿ ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1, ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಗೌರ ಬಿ. ಪಂಚಾಯತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 1 ನೇ ಆರೋಪಿತನು ಯಾವುದೇ ಕಾಮಗಾರಿಗಳನ್ನು ನಿರ್ವಹಿಸದೇ ಸರಕಾರದ ಐದು ಕೋಟಿ ಹಣವನ್ನು ದುರುಪಯೋಗಪಡಿಸಿಕೊಳ್ಳಲು ಪ್ರಯತ್ನ ಮಾಡಿರುವ ಬಗ್ಗೆ ನನಗೆ ಗೊತ್ತಾಯಿತು. ಪಿರ್ಯಾದಿ ಕೊಟ್ಟ 8-ದಿನ ನಂತರ ಪೋಲಿಸ ಠಾಣೆಗೆ ಕರೆಸಿ ನನ್ನ ಸಹಿ ಪಡೆದಿರುತ್ತಾರೆ. ಎಸ್ ಬಿ ಐ ಅಕೌಂಟ ನಂ.30606268038 ಖಾತೆಯ ಬ್ಯಾಂಕ ಸೇ್ಟಮೆಂಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದೇ ಬ್ಯಾಂಕಿನ ಅಕೌಂಟ ನಂ.32315166010 ನ್ನು ಖಾತೆಯ ಬ್ಯಾಂಕ ಸೇ್ಟಮೆಂಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಖಾತೆ ನಂ.31161826294 ಖಾತೆಯ 23 ಪುಟಗಳ ಬ್ಯಾಂಕ ಸೇ್ಟಮೆಂಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಆರೋಪಿತರ ಆಕ್ಷೇಪಣೆಗೊಳಪಟ್ಟು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಕೃಷ್ಣಾ ಗ್ರಾಮೀಣ ಬ್ಯಾಂಕ ಖಾತೆ ನಂ.110201102010001235 ಒಟ್ಟು 4 ಪುಟಗಳ ಬ್ಯಾಂಕ ಸ್ಟೇಟಮೆಂಟಗಳನ್ನು ಆರೋಪಿತರ ಆಕ್ಷೇಪಣೆಗೊಳಪಟ್ಟು ನಿಪಿ-5 ಎಂದು ಗುರುತಿಸಲಾಯಿತು.

ಜಿಲ್ಲಾ ಪಂಚಾಯತ ಕಲಬುರಗಿ ರವರ ಜ್ಞಾಪನಾ ಪತ್ರದ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿರತ್ತಾರೆ. ಸದರಿ ಜ್ಞಾಪನಾ ಪತ್ರ ಜೆರಾಕ್ಷ ಪ್ರತಿಯಿರುವುರಿಂದ ಅದನ್ನು ಗುರುತಿಸಿಲ್ಲ. 2014-2015 ನೇ ಸಾಲಿನ ಹಣಕಾಸಿನ ನಿರ್ವಹಣೆಯ 64 ಪುಟಗಳುಳ್ಳ ಸ್ಟೇಟಮೆಂಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

ನನ್ನ ಮೇಲಾಧಿಕಾರಿ ನನಗೆ ನೀಡಿದ ದಾಖಲಾತಿ ಹಾಗೂ ನಿರ್ದೇಶನದ ಮೇರೆಗೆ ದೂರನ್ನು ನೀಡಿರುತ್ತೇನೆ. 1 ನೇ ಆರೋಪಿತನು ಅಪರಾಧ ಮಾಡಿರಬಹುದು ಎಂದು ಅನಿಸುತ್ತದೆ.

(ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ಪ್ರಕರಣದಲ್ಲಿಯ ದಾಖಲೆಗಳನ್ನು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿಸಲಾಯಿತು)

ಪಾಟಿ ಸವಾಲುಃ ಎಪಿಪಿ ಯವರಿಂದ

ದಿನಾಂಕ 06.09.2014 ರಂದು 2013-14 ನೇ ಸಾಲಿನ ನರೇಗಾ ಯೋಜನೆಯಲ್ಲಿ 1 ನೇ ಆರೋತನು ಕಾಮಗಾರಿ ಅನುಸ್ಠಾನದಲ್ಲಿ ಹಣಕಾಸಿನ ಅವ್ಯವಹಾರ ಮಾಡಿದ ಬಗ್ಗೆ ಉಲ್ಲೇಖದ ಪತ್ರದ ಪ್ರಕಾರ ಕಂಡಬಂದಿರುತ್ತದೆ ಎಂದರೆ ಸರಿ. ದಿನಾಂಕ 04.09.2014 ರಂದು 1 ನೇ ಆರೋಪಿಗೆ ನರೇಗಾ ಕಾಮಗಾರಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಲು ಸೂಚಿಸಿದ್ದೆ ಎಂದರೆ ಸರಿ. ದಾಖಲಾತಿಗಳನ್ನು ಹಾಜರುಪಡಿಸುವಂತೆ 1 ನೇ ಆರೋಪಿಗೆ ಸೂಚಿಸಿದರೂ ಸಹ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ದಾಖಲಾತಿಗಳನ್ನು ಕಳವು ಮಾಡಿ

ಸರಕಾರಕ್ಕೆ ವಂಚನೆ ಮಾಡುವ ಉದ್ದೇಶದಿಂದ ತಲೆಮರೆಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸೂಚಿಸಿದಂತೆ ದಾಖಲಾತಿಗಳನ್ನು 1 ನೇ ಆರೋಪಿತನ್ನು ನೀಡದಿರುವುರಿಂದ ಸದರಿ ವಿಷಯವನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದಿರುತ್ತೇನೆ ಎಂದರೆ ಸರಿ. ನಂತರ ಮೇಲಾಧಿಕಾರಿಗಳು ಆರೋಪಿತರ ವಿರುದ್ಧ ದೂರು ದಾಖಲಿಸುವಂತೆ ನನಗೆ ಸೂಚಿಸಿದ ಮೇರೆಗೆ ನಾನು ದೂರು ದಾಖಲಿಸಿರುತ್ತೇನೆಂದರೆ ಸರಿ.

ದೂರು ದಾಖಲಾದ ನಂತರ ದಿನಾಂಕ 08.09.2014 ರಂದು ನನ್ನನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಸಹಿ ಪಡೆದಿರುತ್ತಾರೆ ಎಂದು ನುಡಿಯುಯುತ್ತಾರೆ. ನನ್ನ ಮೇಲಾಧಿಕಾರಿ ಸೂಚಿಸಿದಂತೆ ಚಾಸಾ-5 ರವರೊಂದಿಗೆ ಪೋಲಿಸ ಠಾಣೆಗೆ ಹಾಜರಾಗಿದ್ದೆ ಎಂದರೆ ಸರಿಯಲ್ಲ. ಆ ದಿನ ಹೇಳಿಕೆ ಕೊಡುವಾಗ 1, 2 ಆರೋಪಿತರು ಕಾಮಗಾರಿಗೆ ಬೇಕಾಗುವ ಸಾಮಗ್ರಿಗಳನ್ನು ಪೂರೈಕೆ ಮಾಡುವ 4 ರಿಂದ 8 ನೇ ಆರೋಪಿತರು ಇವರೆಲ್ಲರೂ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿಸಿ ಯಾವುದೇ ಕಾಮಗಾರಿಗಳನ್ನು ಮಾಡದೇ ನಿಯಮ ಬಾಹಿರವಾಗಿ 533.5 ಲಕ್ಷ ಹಣವನ್ನು ಸಕರಾರದಿಂದ ಪಡೆದಿರುವುದು ಕಂಡುಬಂದಿರುತ್ತದೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರಿತಿಯಾಗಿ 107.6 ಲಕ್ಷ ರೂ.ಗಳನ್ನು ಡ್ರಾ ಮಾಡಲು ಸಿದ್ದತೆ ಮಾಡಿಕೊಂಡು ಸಂಚು ರೂಪಿಸಿದ್ದರು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಎಲ್ಲಾ ದಾಖಲಾತಿಗಳನ್ನು ನನ್ನ ಮೇಲಾಧಿಕಾರಿಗಳು ದೃಡೀಕರಣ ಮಾಡಿ ಕಳುಹಿಸಿದ್ದರು ಎಂದರೆ ಸರಿಯಲ್ಲ. ಮೇಲಾಧಿಕಾರಿಗಳು ತಿಳಿಸಿದಂತೆ ಪ್ರಕರಣ ದಾಖಲು ಮಾಡಿ ನಂತರ ಪುರವಣಿ ಹೇಳಿಕೆ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಎಲ್ಲಾ ದಾಖಲೆಗಳನ್ನು ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮರುಹೇಳಿಕೆ ನೀಡುವ ಸಮಯದಲ್ಲಿ 1 ಮತ್ತು 2 ನೇ ಆರೋಪಿತರೊಂದಿಗೆ ಉಳಿದ ಆರೋಪಿತರು

ಶಾಮೀಲಾಗಿರುವ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 20.06.2015 ರಂದು ಮುಂದುವರೆದ ಹೇಳಿಕೆಗಾಗಿ ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಅದೇ ದಿನ ಜಿಲ್ಲಾ ಪಂಚಾಯತಿಯ ಚಾಸಾ-7 ರಿಂದ 13 ರವರು ನೀಡಿರುವ ವರದಿಯನ್ನು ಪರಿಶೀಲಿಸಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಕಾಮಗಾರಿಗೆ ಸಂಬಂಧಪಟ್ಟಂತೆ ಕೇವಲ 43 ಕಡತಗಳನ್ನು ಹಾಜರುಪಡಿಸಿ ಉಳಿದ 110 ಕಡತಗಳನ್ನು ಕಳ್ಳತನ ಮಾಡಿರುತ್ತಾರೆ ಎಂದು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ 43 ಕಡತಗಳಿಗೆ ಸಂಬಂಧಿಸಿದಂತೆ ರೂ.5,19,03,853/- ಹಣವನ್ನು 1, 2ನೇ ಆರೋಪಿತರು ಸೇರಿ ಉಳಿದ ಆರೋಪಿತರೊಂದಿಗೆ ಸೇರಿ ಅವ್ಯವಹಾರ ಮಾಡಿರುವ ಬಗ್ಗೆ ವರದಿಯ ಪ್ರಕಾರ ವಂಚನೆ ಮಾಡಿರುವುದು ಕಂಡುಬಂದಿರುತ್ತದೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಸೇರಿ ಮೇಲ್ಕಂಡ ಹಣವನ್ನು ವಂಚನೆ ಮಾಡಿ 110 ಕಡತಗಳನ್ನು ಕಳ್ಳತನ ಮಾಡಿರುತಾರೆಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ 11 ಪುಸ್ತಕಗಳನ್ನು ಪರಿಶೀಲಿಸಿ ಆರೋಪಿತರು ಅಕ್ರಮವೆಸಗಿರುವ ಬಗ್ಗೆ ತಿಳಿದುಕೊಂಡು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸೊನ್ನ ಗ್ರಾಮದಿಂದ ಸೋಹೆಲ್ ಪಟೇಲ್ ರವರ ಹೊಲದವರೆಗೆ ಎರಡು ಬಾರು ಮುರುಮ್ ರಸ್ತೆ ಕಾಮಗಾರಿ ಮಾಡಿರುತ್ತಾರೆಂದು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಅದೇ ನಾಗಪ್ಪ ಬಸಣ್ಣ ಕಿಣಗಿ ರವರ ಹೊಲದಿಂದ ಶಿವಪುತ್ರಪ್ಪ ಕಿಣಗಿ ರವರ ಹೊಲದವರೆಗೆ ಕಾಮಗಾರಿಗೆ ಸಂಬಂಧಪಟ್ಟಂತೆ ಸುಳ್ಳು ಬಿಲ್ಲುಗಳನ್ನು ತಯಾರಿಸಿ ಬಸವರಾಜ ಸಿದ್ರಾಮಪ್ಪ ರವರ ಖಾತೆಗೆ ದಿನಾಂಕ 02.09.2014 ರಂದು ರೂ.33,88,000/- ನಿಯಮ ಬಾಹೀರವಾಗಿ ಪಾವತಿಸಿರುವ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿಯಾಗಿ ಎಲ್ಲಾ ಆರೋಪಿತರು

ಸೇರಿ ರೂ.5,19,03,853/- ಹಣವನ್ನು ದುರ್ಬಳಕೆ ಮಾಡಿಕೊಂಡು ಸರಕಾರಕ್ಕೆ ವಂಚನೆ ಮಾಡಿರುತ್ತಾರೆಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗಗಳನ್ನು ಈಗ ಸಾಕ್ಷಿಗೆ ಓದಿ ಹೇಳಿದ್ದು ಅವುಗಳನ್ನು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು.

ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿಯಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಆರೋಪಿತರ ಪರ ವಕೀಲರು ಕಾಲಾವಕಾಶ ಕೋರಿದ್ದು ರೂ.200/- ಖರ್ಚಿನೊಂದಿಗೆ ಮುಂದೂಡಲಾಯಿತು.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>**
**<u>ಅಫಜಲಪೂರ</u>**

ಸಿಸಿ ನಂ.283/2016

ಚಾಸಾ-2 ಪ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ
ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕಃ 18.12.2019

| | | |
|---|---|---|
| ಹೆಸರು | ಃ | ಶಿವಪ್ಪ ಅಲಮೇಲಕರ್ |
| ತಂದೆ ಹೆಸರು | ಃ | ಹುಚ್ಚಪ್ಪ |
| ವಯಸ್ಸು | ಃ | 41-ವರ್ಷ |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಗೌರ ಬಿ. ತಾ. ಅಫಜಲಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಆರೋಪಿತರ ಪರಿಚಯವಿಲ್ಲ. ಈಗ ನಾನು ನೋಡುತ್ತಿರುವ ದಾಖಲೆ ಮೇಲಿನ ಸಹಿ ನನ್ನದೇ ಇರುತ್ತದೆ. ಸಾಕ್ಷಿ ಘಟನಾ ಸ್ಥಳದ ಹಾಗೂ ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-6 ಎಂದು, ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಮಾಡಿ ಏನನ್ನೂ ಜಪ್ತಿಪಡಿಸಿಕೊಂಡಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ.

(ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ಪ್ರಕರಣದಲ್ಲಿಯ ದಾಖಲೆಗಳನ್ನು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿಸಲಾಯಿತು)

ಪಾಟಿ ಸವಾಲುಃ ಎಪಿಪಿ ಯವರಿಂದ

ಗೌರ ಬಿ. ನರೇಗಾ ಯೋಜೆಯಲ್ಲಿ 2014-15 ಸಾಲಿನಲ್ಲಿ ಹಣದ ಅವ್ಯವಹಾರವಾದ ಬಗ್ಗೆ ಆರೋಪಿತರ ಮೇಲೆ ಪ್ರಕರಣ ದಾಖಲಾದ ಬಗ್ಗೆ ಗೊತ್ತಿಲ್ಲ. ದಿನಾಂಕ 20.10.2014 ರಂದು ಮದ್ಯಾಹ್ನ 3 ರಿಂದ 4 ಗಂಟೆವರೆಗೆ 1 ನೇ ಆರೋಪಿತನ ಮನೆಗೆ ದಾಖಲಾತಿಗಳನ್ನು ಜಪ್ತಿಪಡಿಸಿಕೊಳ್ಳಲು ಹೋಗಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿತನ ಮನೆಯಲ್ಲಿದ್ದ ನರೇಗಾ ಕಾಮಗಾರಿಗೆ ಸಂಬಂಧಪಟ್ಟ 75 ಕಡತಗಳನ್ನು ಹಾಗೂ 2014-15 ನೇ ಸಾಲಿನ ಕ್ಯಾಶಪುಸ್ತಕ, ಕಾಮಗಾರಿ ಅಳತೆಯ 5 ಪುಸ್ತಕಗಳನ್ನು ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ ಜಪ್ತಿಪಡಿಸಿಕೊಂಡು ಪಂಚನಾಮೆ ಬರೆದು ಓದಿ ಹೇಳಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಕಾಗದ ಪತ್ರಗಳನ್ನು ಸಾಕ್ಷಿಗೆ ತೋರಿಸಲಾಗಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಮ್ಮ ಸಮಕ್ಷಮ ಮಾಡಿ ಜಪ್ತಿಪಡಿಸಿಕೊಂಡರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.
ಮರು ವಿಚಾರಣೆಃ ಇಲ್ಲ.
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>**
**<u>ಅಫಜಲಪೂರ</u>**

ಸಿಸಿ ನಂ.283/2016

ಚಾಸಾ-3 ಪ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ
ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕಃ 18.12.2019

| | | |
|---|---|---|
| ಹೆಸರು | ಃ | ಶ್ರೀಕಾಂತ ನಿಂಬರಗಿ |
| ತಂದೆ ಹೆಸರು | ಃ | ಪುಂಡಪ್ಪ |
| ವಯಸ್ಸು | ಃ | 35-ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಗೌರ ಬಿ. ತಾ. ಅಫಜಲಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಆರೋಪಿತರ ಪರಿಚಯವಿಲ್ಲ. ಈಗ ನಾನು ನೋಡುತ್ತಿರುವ ದಾಖಲೆ ಮೇಲಿನ ಸಹಿ ನನ್ನದೇ ಇರುತ್ತದೆ. ಸಾಕ್ಷಿ ಘಟನಾ ಸ್ಥಳದ ಹಾಗೂ ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ಈಗಾಗಲೇ ನಿಪಿ-6 ಎಂದು ಗುರುತಿಸಿದ್ದು, ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-6 ಬಿ ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಮಾಡಿ ಏನನ್ನೂ ಜಪ್ತಿಪಡಿಸಿಕೊಂಡಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ.

(ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ಪ್ರಕರಣದಲ್ಲಿಯ ದಾಖಲೆಗಳನ್ನು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿಸಲಾಯಿತು)

ಪಾಟಿ ಸವಾಲುಃ ಎಪಿಪಿ ಯವರಿಂದ

ಗೌರ ಬಿ. ನರೇಗಾ ಯೋಜೆಯಲ್ಲಿ 2014-15 ಸಾಲಿನಲ್ಲಿ ಹಣದ ಅವ್ಯವಹಾರವಾದ ಬಗ್ಗೆ ಆರೋಪಿತರ ಮೇಲೆ ಪ್ರಕರಣ ದಾಖಲಾದ ಬಗ್ಗೆ ಗೊತ್ತಿಲ್ಲ. ದಿನಾಂಕ 20.10.2014 ರಂದು ಮದ್ಯಾಹ್ನ 3 ರಿಂದ 4 ಗಂಟೆವರೆಗೆ 1 ನೇ ಆರೋಪಿತನ ಮನೆಗೆ ದಾಖಲಾತಿಗಳನ್ನು ಜಪ್ತಿಪಡಿಸಿಕೊಳ್ಳಲು ಹೋಗಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿತನ ಮನೆಯಲ್ಲಿದ್ದ ನರೇಗಾ ಕಾಮಗಾರಿಗೆ ಸಂಬಂಧಪಟ್ಟ 75 ಕಡತಗಳನ್ನು ಹಾಗೂ 2014-15 ನೇ ಸಾಲಿನ ಕ್ಯಾಶಪುಸ್ತಕ, ಕಾಮಗಾರಿ ಅಳತೆಯ 5 ಪುಸ್ತಕಗಳನ್ನು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ ಜಪ್ತಿಪಡಿಸಿಕೊಂಡು ಪಂಚನಾಮೆ ಬರೆದು ಓದಿ ಹೇಳಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಕಾಗದ ಪತ್ರಗಳನ್ನು ಸಾಕ್ಷಿಗೆ ತೋರಿಸಲಾಗಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಮ್ಮ ಸಮಕ್ಷಮ ಮಾಡಿ ಜಪ್ತಿಪಡಿಸಿಕೊಂಡರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.
ಮರು ವಿಚಾರಣೆಃ ಇಲ್ಲ.
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ